
ನಂಗೆ ಹೆಂಗೆ ಗೊತ್ತಾಗಬೇಕು? ಮಾವ–ಅಳಿಯ ಇಬ್ರೂತಾವನು ಮಲ್ಕಂಡಿದ್ದೀನಿ. ಅದನ್ನೆಲ್ಲಾ ಇವರ ಹತ್ರ ಹೆಂಗೆ ಹೇಳಾದು?

ಆಮೇಕೆ ಒಂದು ಪೋಲೀಸಮ್ಮ ಒಂದು ಬೇರೆ ರೂಮಿಗೆ ಕರಕೊಂಡು ಹೋಗಿ ನಿಧಾನವಾಗಿ ಎಲ್ಲಾ ಕೇಳಿದ್ಲು. ನಾನು ಮೊದ ಮೊದಲು ಬಾಯಿ ಬಿಡಲಿಲ್ಲ. ಅವಳಿಗೆ ರೇಗಿಹೋಯ್ತು ಕಾಣ್ತದೆ. 'ಸರಿಯಾಗಿ ಉತ್ತರ ಹೇಳ್ದಿದ್ದರೆ ನಿನ್ನ ಜೈಲಿಗೆ ಹಾಕ್ತಾರೆ' ಅಂದ್ಲು. ಆಗ ನಂಗೂ ಕ್ಯಾಣ ಹತ್ಕೋತು, 'ಅಷ್ಟಕ್ಕೂ ನಾನೇನ ತಪ್ ಮಾಡಿರೋದು ಜೈಲಿಗೆ ಹಾಕಾಕೆ? ನೀವೇ ಆವಣ್ಣಂದಿರಿಬ್ಬರನ್ನೂ ಕೇಳ್ಕಾ ಹೋಗಿ' ಎಂದೆ. 'ಅಯ್ಯೋ ಪಾಪಿ ನನ್ನ ಮಕ್ಳು ಆ ಪ್ರೊಫೆಸರ್ ಮತ್ತೆ ಅವರ ಅಳಿಯ ಇಬ್ಬರೂ ನಿನ್ನ ಬಳಸಿಕೊಂಡರಾ?' ಎಂದು ಪೋಲೀಸಮ್ಮ ಕಿಡಿಕಿಡಿ ಕೆಂಡವಾದಳು.



ಮತ್ತೊಂದು ಪ್ರಶ್ನೇನೂ ಕೇಳಲಿಲ್ಲ. ಇನ್ಸಪೆಕ್ಟರು ರೂಮಿಗೆ ಹೋಗಿ ಬಾಗಿಲು ಹಾಕ್ಕಂಡು ಗುಸು ಗುಸು ಅಂತ ಮಾತಾಡಿ ಹೊರಬಂದ್ಲು. ಆಮೇಕೆ ಪ್ರೊಫೆಸರ್ ಹೋದ್ರು, ಆಗಲೂ ಬಾಗ್ಲು ಮುಚ್ಚಿ ಮಾತಾಡ್ತಿದ್ದರು. ಅವರು ಹೊರಬಂದಾಗ ಅವರ ಮಕ ನೋಡಂಗಿರಲಿಲ್ಲ. ಕಂಗೆಟ್ಟು ಹೋಗಿತ್ತು. ಮತ್ತೆ ನಮ್ಮವ್ವ ಅಪ್ಪ, ಊರೌರು ಬಂದಿದ್ದರಲ್ಲ. ಅವರ್ನೆಲ್ಲಾ ಕೂರ್ಸಿ ಮಾತಾಡಿದ್ರು. ನಾನು ಹೊರಗೆ ಕುಂತಿದ್ದೆ. ಸ್ವಲ್ಪ ಹೊತ್ತಿನ ಮೇಲೆ ಸೌಮ್ಯಕ್ಕ ಬಂದು ಆ ಪೋಲೀಸಮ್ಮನ ಜೊತೆ ಮಾತಾಡಿ ಅಮೇಲೆ ನನ್ನ ಕರೆದ್ರು. 'ನೀನು ಚಿಕ್ಕವಳು. ಅವರು ಕರೆದ್ರು ಅಂತ ನೀನು ಅವರುಗಳ ಜೊತೆ ಹೋಗಿದ್ದು ನಿನ್ನ ತಪ್ಪು. ಈಗ ತಪ್ಪು ಆಗಿಹೋಗಿದೆ. ನೀನು ಮೆಜಾರಿಟಿಗೆ ಬಂದಿಲ್ಲ ಕೂಡ. ಈಗ ನೀನು ಅವರ ಮೇಲೆ ದೂರು ಕೊಡ್ತೀಯಾ, ಇಲ್ಲಾ ನಿನ್ನ ಹೊಟ್ಟೇಲಿರುವ ಆ ಪಾಪದ ಪಿಂಡ ತೆಗೆಸಿ ಹಾಕಿ ನಿಮ್ಮೂರಿಗೆ ವಾಪಸ್ಸು ಹೊಗ್ತೀಯೋ' ಎಂದರು. ಅಷ್ಟರಲ್ಲಿ ಸೌಮ್ಯಕ್ಕ 'ಪಾಪ, ಆ ಹುಡುಗಿಗೆ ಏನೂ ಗೊತ್ತಾಗಲ್ಲ. ನೀವು ಅವರಪ್ಪ ಅಮ್ಮನಿಗೆ ತಿಳಿ ಹೇಳಿ. ಆ ಧಡಿಯ ಹೇಳ್ತಾನೆ ಅಂತ ನಮ್ಮ ಪ್ರೊಫೆಸರ್ ಅಥವಾ ಅವರ ಅಳಿಯ ಇವಳನ್ನು ಮದುವೆ ಆಗೋಕೆ ಸಾಧ್ಯನಾ? ನಾನು ಈಗ ಅವಳನ್ನು ಡಾಕ್ಟರ್ ಹತ್ತಿರ ಕರಕೊಂಡು ಹೋಗಿ ಅಬಾರ್ಷನ್ ಮಾಡಿಸಿಕೊಂಡು ಬರ್ತೇನೆ. ಒಂದಷ್ಟು ದುಡ್ಡು ಕೊಟ್ಟು ಕಳುಹಿಸೋಣ ಬಿಡಿ' ಎನ್ನುತ್ತಾ 'ಸೇವಂತಿ ಬಾ' ಎಂದರು.

ನಾನು ಅವರನ್ನು ಹಿಂಬಾಲಿಸಿದೆ. ಡಾಕ್ಟರಮ್ಮ ಕೈ ಹಾಕಿ ಎಳ್ದಾಗ ಪ್ರಾಣ ಹೊಂಟೋದಂಗಾಯ್ತು. ಕಿರಚಿ ಅರಚಿ ಆ ಡಾಕ್ಟರ ಕೈ ಇಟ್ಕೊಂಡು ಎಳದಾಡಿಬಿಟ್ಟೆ. ಪಾಪ ಸೌಮ್ಯಕ್ಕ ಪಕ್ಕದಾಗ ನಿಂತ್ಕೊಂಡು ಸಮಾಧಾನ ಮಾಡ್ತಾ ಇಂಗ್ಲಿಷಲ್ಲಿ ಮಾತಾಡ್ತಾ ಇದ್ರು. ನಂಗೇನೂ ಅರ್ಥವಾಗದಿದ್ರೂ ಆ ಮಾವ–ಅಳಿಯನ್ನ ಬೈತಾವ್ರೆ ಅನ್ನುಸ್ತು. ಸೌಮ್ಯಕ್ಕ 'ನಿಂಗೆ ಬೇಜಾರಾಯ್ತು ಹೊಟ್ಟೆ ಇಳಿಸ್ಕಂಡಿದ್ದಕ್ಕೆ' ಅಂತ ಕೇಳಿದ್ರು.

'ಅದೇನೋ ನಂಗೆ ಬೇಸರ ಗೀಸರ ಏನೂ ಅಗಣ್ಲೆ ಅನ್ನಿ, ಆದರೆ ಡಾಕ್ಟರು ಹೊಟ್ಟೆ ಒಳಕ್ಕೆ ಅನಾಮತ್ ಕೈ ಹಾಕಿ ಗೂರಾಡಿ ಬಿಟ್ರಲ್ಲ ಒಸಿ ಜಾಸ್ತೀನೆ ನೋವಾಯ್ತು, ಸೊಂಟ ಬಿದ್ದೇ ಹೋಯ್ತು, ತಲೆ ಗಿಮ್ ಅಂದೋಯ್ತು ಅಷ್ಟೇ ಕಾಣೆ, ಈಗೇನಿಲ್ಲ' ಎಂದೆ.

ಹತ್ತು ನಿಮಿಷ ಆದ ಮೇಲೆ ನರಸಮ್ಮ ಬಂದು, 'ಎದ್ದೇಳು ಮ್ಯಾಕೆ. ಇಷ್ಟು ಚಿಕ್ಕ ವಯಸ್ಸಿಗೆ ಇದೆಲ್ಲಾ ಬೇಕಿತ್ತಾ ನಿಂಗೆ' ಅನ್ಕೊತ ಕೆಕ್ಕರಿಸಿ ನೋಡಿದ್ಲು.

'ನಂಗ್ಯಾಕೆ ಬೈದಿರಿ? ಆ ಮಾವ ಅಳಿಯಂಗೆ ಬೈಕೋ ಹೋಗಿ, ಇದರಲ್ಲಿ ನಂದೇನ ತಪ್ಪೈತೆ?' ಎನ್ನುತ್ತಾ ಮಂಚದಿಂದ ಇಳಿಯಲು ಕಷ್ಟಪಟ್ಟೆ.

'ನಿನ್ನದೇನೂ ತಪ್ಪಿಲ್ಲ, ಅವರ ತಪ್ಪನ್ನು ನೀನು ಈಗ ಅನುಭವಿಸಿದೆ ಅಷ್ಟೇ. ಪೆದ್ದಮುಂಡೇದೆ, ಖುಷಿ